ಅಬ್ಕಾರಿ ಅಧಿಕಾರಿಗಳ ವರ್ಗಾವಣೆಯ ಬಗ್ಗೆ

೭೭೬. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು) ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಬ್ಕಾರಿ ಇಲಾಖೆಯಲ್ಲಿ ಜಿಲ್ಲಾ ಅಬ್ಕಾರಿ ಅಧಿಕಾರಿಗಳಾಗಿಯೇ (ಸೂಪರಿಂಟೆಂಡೆಂಟ್ ಆಫ್ ಎಕ್ಸೈಜ್) ಕೆಲಸದಲ್ಲಿದ್ದು ಬೇರೆಡೆಗೆ ವರ್ಗಾವಣೆಯಾದರೂ ಜಿಲ್ಲಾ ಅಬ್ಕಾರಿ ಅಧಿಕಾರಿಗಳಾಗಿಯೇ ಮುಂದುವರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಅಬ್ಕಾರಿ ಅಧಿಕಾರಿಗಳಾಗುವ ಸರಿಸಮಾನವಾದ ಅರ್ಹತೆಯುಳ್ಳವರನ್ನು ಅಬ್ಕಾರಿ ಅಧಿಕಾರಿಗಳನ್ನಾಗಿ ಆಡಳಿತ ಸ್ಥಾನಕ್ಕೆ ಕೊಡದೆ ಕಛೇರಿ ಮತ್ತು ಇತರ ಸ್ಥಾನಗಳಲ್ಲಿಯೇ ಉಳಿಸಿರಲು ಕಾರಣವೇನು? ಇಂತಹ ಅಧಿಕಾರಿಗಳ ವರ್ಗಾವಣೆಯಲ್ಲಿ ಸರ್ಕಾರದವರು ಅನುಸರಿಸುತ್ತಿರುವ ನೀತಿಯೇನು?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—

ಅ) ಇಲ್ಲ.

ಆ) ಅಬ್ಕಾರಿ ಅಧೀಕ್ಷಕರುಗಳನ್ನು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ. ಡಿಪಿಎಆರ್ ೯ ಎಸ್‌ಟಿಆರ್ ೮೪, ದಿನಾಂಕ. ೫-೯-೮೫ರಲ್ಲಿ ನೀಡಲಾಗಿರುವ ಸೂಚನೆಗಳ ಪ್ರಕಾರ ವರ್ಗಾವಣೆ ಮಾಡಲಾಗುತ್ತಿದೆ.

. ಮೈಸೂರಿನ ದಸರಾ ವಸ್ತು ಪ್ರದರ್ಶನ

೭೭೭. ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬ರಲ್ಲಿ ಮೈಸೂರಿನಲ್ಲಿ ನಡೆದ ದಸರಾ ವಸ್ತು ಪ್ರದರ್ಶನಕ್ಕೆ ಸರ್ಕಾರದವರು ಮಂಜೂರು ಮಾಡಿದ ಹಣವೆಷ್ಟು?

ಆ) ಆ ಪೈಕಿ ಎಷ್ಟು ಹಣವನ್ನು ಖಾಯಂ ಕೆಲಸಗಳಿಗೆ ಉಪಯೋಗಿಸಲಾಗಿದೆ?

ಇ) ಈ ದಸರಾ ವಸ್ತು ಪ್ರದರ್ಶನದಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು?

ಈ) ಈ ದಸರಾ ವಸ್ತು ಪ್ರದರ್ಶನಕ್ಕೆ ಖಾಯಂ ಸಮಿತಿಯನ್ನು ನೇಮಕ ಮಾಡಲಾಗುವುದೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ರೂ. ೩೬.೫೦ ಲಕ್ಷ

ಆ) ಇಲ್ಲ.

ಇ) ರೂ. ೨೧,೬೦,೯೦೦-೦೦

ಈ) ನವದೆಹಲಿಯ ಟ್ರೇಡ್ ಫೇರ್ ಅಥಾರಿಟಿ ಮಾದರಿ ಖಾಯಂ ಸಮಿತಿಯನ್ನು ರಚಿಸಲು ಸರ್ಕಾರ ಉದ್ದೇಶಿಸಿದೆ.

ಕುಂದಗೋಳ ಬಸ್ ನಿಲ್ದಾಣಕ್ಕೆ ಟಾರ್ ಹಾಕುವ ಬಗ್ಗೆ

೭೭೮. ಶ್ರೀ ಬಿ. ಎ. ಉಪ್ಪಿನ್ (ಕುಂದಗೋಳ).— ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಗೋಳ ಬಸ್ ನಿಲ್ದಾಣದಲ್ಲಿ ಡಾಂಬರು ಹಾಕದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?